695(1167) : **ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)** : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ 206 ಕಿಮೀ ಇಂದ 168,73 ಹಾಗೂ 170,88 ಕಿಮೀ ವರೆಗಿನ ಅಭಿವೃದ್ಧಿ ಮತ್ತು ಡಬಲ್ ರಸ್ತೆ ಮಾಡಲು ಅಂದಾಜು ವೆಚ್ಚ ತಯಾರಿಸಲಾಗಿದೆಯೇ ;

ಆ) ಈ ಪ್ರದೇಶ ವ್ಯಾಪ್ತಿಗೆ ಬರುವ ಅಂಗಡಿ ಮತ್ತು ಕಟ್ಟಡ ತೆರವುಗೊಳಿಸಲು ಆದೇಶ ಆಗಿದೆಯೇ: ಇದನ್ನು ಯಾವಾಗ ಮಾಡಲಾಗುವುದು:

ಇ) ರಾಷ್ಟ್ರೀಯ ಹೆದ್ದಾರಿ 206 ಕಿಮೀ 163 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಮತ್ತು ಚರಂಡಿ ವ್ಯವಸ್ಥೆಗಾಗಿ ಅಂದಾಜು ವೆಚ್ಚ ನಕ್ಷೆ ತಯಾರಿಸಲಾಗಿದೆಯೇ ; ಈ ಕಾಮಗಾರಿಯನ್ನು ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು:

ಈ) ಹಾಗಿದ್ದಲ್ಲಿ ಇದರ ಮೊತ್ತವೆಷ್ಟು: ಈ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಷ್ಟ್ರೀಯ ಹೆದ್ದಾರಿ 206 ಕಿ.ಮೀ. 168.50 ರಿಂದ 171.50 ಕಿಮೀ ವರೆಗಿನ ಹೆದ್ದಾರಿಯನ್ನು ಅಗಲಪಡಿಸುವ ಕಾಮಗಾರಿಯ ಅಂದಾಜನ್ನು ಕೇಂದ್ರ ಭೂ ಸಾರಿಗೆ ಸಚಿವಾಲಯದ ಅನುಮೋದನೆಗೆ ದೊರೆತ ನಂತರ ಕಾಮಗಾರಿ ಪ್ರಾರಂಭಿಸಲಾಗುವುದು.

ಆ) ಈ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಅಂಗಡಿ ಮತ್ತು ಕಟ್ಟಡಗಳನ್ನು ತೆರವುಗೊಳಿಸಲು ಜಿಲ್ಲಾಧಿಕಾರಿಗಳು ಸಂಬಂಧಪಟ್ಟವರಿಗೆ ಸೂಚಿಸಿರುತ್ತಾರೆ. ಹಾಗೂ ಅತಿಕ್ರಮಣ ತೆರವುಗೊಳಿಸುವಿಕೆ ಪ್ರಗತಿಯಲ್ಲಿದೆ.

ಇ) ರಾಷ್ಟ್ರೀಯ ಹೆದ್ದಾರಿ 206 ತುಮಕೂರು–ಹೊನ್ನಾವರ ರಸ್ತೆಯ ಕಿಮೀ 153.00 ರಿಂದ 163.00 ರವರೆಗಿನ ರಾಷ್ಟ್ರೀಯ ಹೆದ್ದಾರಿ ಅಗಲಪಡಿಸುವ (ಚರಂಡಿ ವ್ಯವಸ್ಥೆಯು ಸೇರಿದಂತೆ) ಕಾಮಗಾರಿಗೆ ಅಂದಾಜು ತಯಾರಿಸಿ ಕೇಂದ್ರ ಭೂ ಸಾರಿಗೆ ಸಚಿವಾಲಯದ ಅನುಮೋದನೆಗೆ ಸಲ್ಲಿಸಲಾಗಿದೆ.

ಈ) ಈ ಕಾಮಗಾರಿಯ ಅಂದಾಜು ವೆಚ್ಚ ರೂ. 346.51 ಲಕ್ಷಗಳು ಕೇಂದ್ರ ಭೂ ಸಾರಿಗೆ ಸಚಿವಾಲಯದ ಅನುಮೋದನೆ ನಂತರ ಕಾಮಗಾರಿ ಪ್ರಾರಂಭಿಸಲಾಗುವುದು.

696(1367) : **ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)** : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಅಲ್ಪಸಂಖ್ಯಾತರ ಜನಗಳಿಗೆ ಸರ್ಕಾರ ಯಾವ ಯೋಜನೆಯನ್ನು ಜಾರಿಗೆ ತಂದಿದೆ ;

ಆ) ಹಾಗಿದ್ದಲ್ಲಿ, ಯೋಜನೆಯ ಪ್ರಗತಿ ಏನು?

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ(ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವೆ ಸಚಿವರು)

ಅ) ಅಲ್ಪಸಂಖ್ಯಾತರ ಸಮುದಾಯಕ್ಕೆ ಸಂಬಂಧಪಟ್ಟ ಕಾರ್ಯಕ್ರಮ ಯೋಜನೆಗಳನ್ನು ಅನುಬಂಧ–1 ರಲ್ಲಿ ನೀಡಿದೆ. ಮಾಗಡಿ ತಾಲ್ಲೂಕಿಗಾಗಿ ಯಾವುದೇ ನಿರ್ದಿಷ್ಟ ಯೋಜನೆ ಇರುವುದಿಲ್ಲ.